MESSAGE

MR. SPEAKER.— I have received a message from the Governor which reads as follows. –

"I am in receipt of Motion of thanks adopted by the Karnataka Legislative Assembly on 7th February 1986 for the Address delivered by me to the Members of the Legislature on 20th January 1986."

ಅಧಿಕೃತ ನಿರ್ಣಯ

ಶ್ರೀ ಎ. ಲಕ್ಷ್ಮೀಸಾಗರ್.— (ಮಾನ್ಯ ಆಹಾರ, ನಾಗರೀಕ ಸರಬರಾಜು, ಸಂಸದೀಯ ಮತ್ತು ನಗರಾಭಿವೃದ್ಧಿ ಸಚಿವರು).— ಅಧ್ಯಕ್ಷರೇ, ನಾನು ಈ ಕೆಳಗಿನ ನಿರ್ಣಯವನ್ನು ಪುನಃ ಮಂಡಿಸುತ್ತೇನೆ.

"ಜನತಾ ಪ್ರಾತಿನಿಧ್ಯ ಅಧಿನಿಯಮ, ೧೯೫೦ರ ೩ನೆಯ ಅನುಸೂಚಿಯೊಂದಿಗೆ ಓದಿ ಕೊಳ್ಳಲಾದ ೩ನೇ ಪ್ರಕರಣದ ಮೂಲಕ ನಿಗದಿಪಡಿಸಿದಂತೆ ಕರ್ನಾಟಕ ರಾಜ್ಯದ ವಿಧಾನ ಪರಿಷತ್ತಿನ ಸ್ಥಾನಗಳ ಒಟ್ಟು ಸಂಖ್ಯೆಯು ೭೩ ಆಗಿರುವುದರಿಂದ ಭಾರತ ಸಂವಿಧಾನದ ೧೭೦ನೇ ಅನುಚ್ಛೇದದ (೩)ನೇ ಖಂಡದ ಅಡಿಯಲ್ಲಿ, ರಾಜ್ಯದ ವಿಧಾನಪರಿಷತ್ತಿನ ಸದಸ್ಯರ ಒಟ್ಟು ಸಂಖ್ಯೆಯು, ವಿಧಾನಸಭೆಯ ಸದಸ್ಯರ ಒಟ್ಟು ಸಂಖ್ಯೆಯ ಮೂರನೆಯ ಒಂದು ಭಾಗವನ್ನು ಮೀರತಕ್ಕದ್ದಲ್ಲವಾಗಿರುವುದರಿಂದಲೂ ಮತ್ತು ಕರ್ನಾಟಕ ರಾಜ್ಯದ ವಿಧಾನ ಪರಿಷತ್ತಿನ ಸದಸ್ಯರ ಸಂಖ್ಯೆಯು ರಾಜ್ಯ ವಿಧಾನ ಸಭೆಯ ಸದಸ್ಯರ ಸಂಖ್ಯೆಯ ಸರಿ-ಸುಮಾರು ಮೂರನೇಯ ಒಂದು ಭಾಗವಾಗಿರುವುದು ಯುಕ್ತವಾಗಿರುವುದೆಂದು ಪರಿಗಣಿಸಿರುವುದರಿಂದ ಮತ್ತು ಜನತಾ ಪ್ರಾತಿನಿಧ್ಯ ಅಧಿನಿಯಮ, ೧೯೫೦ ರ ಎರಡನೆಯ ಅನುಸೂಚಿಯ ಪ್ರಕಾರ, ಕರ್ನಾಟಕ ವಿಧಾನ ಸಭೆಯ ಸ್ಥಾನಗಳ ಒಟ್ಟು ಸಂಖ್ಯೆಯು ೨೨೪ ಆಗಿರುವುದರಿಂದ.

ಆದ್ದರಿಂದ ಈಗ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಸದಸ್ಯರ ಒಟ್ಟು ಸಂಖ್ಯೆಯನ್ನು ೭೫ ಎಂದು ನಿಗದಿ ಪಡಿಸತಕ್ಕದ್ದೆಂದು ಈ ಸದನವು ಶಿಫಾರಸ್ಸು ಮಾಡುತ್ತದೆ."

ಪ್ರಸ್ತಾವನೆಯನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ, ವಿಧಾನ ಪರಿಷತ್ತಿನ ಈಗಿನ ೭೫ರ ಸಂಖ್ಯೆಯನ್ನು ವಿಧಾನಸಭೆಯ ಸಂಖ್ಯೆಗೆ ಅನುಗುಣವಾಗಿ ಹೆಚ್ಚಿಸಬೇಕು ಎನ್ನತಕ್ಕಂಥ ಈ ಅಧಿಕೃತ ನಿರ್ಣಯ ಈ ಹಿಂದಿನ ಅಧಿವೇಶನದಲ್ಲಿಯೇ ಚರ್ಚೆಗೆ ಬಂದಾಗ, ಈ ನಿರ್ಣಯವನ್ನು ಕೊನೆಯ -ಗಳಿಗೆಯಲ್ಲಿ ತಂದಿದ್ದಾರೆ. ಇದನ್ನು ಇಲ್ಲಿ ಚರ್ಚೆಗೆ ತೆಗೆದುಕೊಳ್ಳಲು ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ತೀರ್ಮಾನ ಮಾಡಿಲ್ಲ ಎನ್ನತಕ್ಕಂಥ ಹಲವಾರ ಕಾರಣಗಳನ್ನು ಮಾನ್ಯ ಸದಸ್ಯರು ಕೊಟ್ಟು ಇದರ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಪ್ರಕ್ತಪಡಿಸಿದ ಮೇಲೆ ತಾವೂ ಸಹ ಇದನ್ನು ನಂತರ ತೆಗೆದುಕೊಳ್ಳೋಣ ಎಂದು ಸೂಚಿಸಿದಿರಿ. ಆದರ ಪ್ರಕಾರ ಮೊನ್ನೆ ೧೫ನೇ ತಾರೀಖು ನಡೆದ ಬಿಸಿನೆಸ್ ಅಡ್ವೈಸರಿ ಕಮಿಟಿ ಮುಂದೆ ಈ ವಿಚಾರ ಪ್ರಸ್ತಾಪಕ್ಕೆ ಬಂದಾಗ, ಇದನ್ನು ಚರ್ಚೆಗೆ ತೆಗೆದುಕೊಳ್ಳಲು ಅವಕಾಶ ನೀಡಬೇಕು ಎಂದು ನಿರ್ಣಯವಾಗಿದೆ. ಇದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಇದರ ಜೊತೆಗೆ ಈ ಬಗ್ಗೆ ಸಚಿವಸಂಪುಟದಲ್ಲಿ ತೀರ್ಮಾನವಾಗಿದೆಯೇ ಎಂದು ಆ ದಿನ ಕೇಳಿದ್ದರು? ೧೯೮೪ರಲ್ಲಿಯೇ ಈ ಬಗ್ಗೆ ಸಚಿವಸಂಪುಟದಲ್ಲಿ ತೀರ್ಮಾನವಾಗಿದೆ ಇದರ ಜೊತೆಗೆ ಮೊನ್ನೆ ೧೫ನೇ ತಾರೀಖು ನಡೆದ ಸಚಿವ ಸಂಪುಟದ ಸಭೆಯಲ್ಲಿ ಸಹ ಇದನ್ನು ಪುನ: ಪುನರುಚ್ಚಾರ ಮಾಡಲಾಗಿದೆ. ಈ ನಿರ್ಣಯದ ಮೇಲೆ ಮಾನ್ಯ ಪಾಟೀಲ್ ಅವರು ಮಾನ್ಯ ವೀರಪ್ಪಮೊಯಿಲಿ ಅವರು ಮಾನ್ಯ ಬಂಗಾರಪ್ಪನವರು ಆ ದಿನ ಮಾತನಾಡಿ ತಮ್ಮ ಅಭಿಪ್ರಾಯಗಳನ್ನು ಮತ್ತು ತಮ್ಮ ಸಲಹೆ ಹಾಗೂ ಸೂಚನೆಗಳನ್ನು ಕೊಟ್ಟಿದ್ದಾರೆ. ಈ ದಿನ ಇನ್ನಿತರ ಮಾನ್ಯ ಸದಸ್ಯರುಗಳು ಈ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹಾಗೂ ಸೂಚನೆಗಳನ್ನು ಕೊಡುವು